ವಿಭಾಗ	ಪ್ರಕರಣ ಸಂಖ್ಯೆ	ಪಾವತಿಸಿದ ಮೊತ್ತ (ರೂ.)
ಹುಣಸೂರು ವನ್ಯಜೀವಿ ವಿಭಾಗ	296	2,34,193.00
ಬಂಡೀಪುರ ಹುಲಿಯೋಜನೆ ವಿಭಾಗ	1125	9,20,550.00
ಮೈಸೂರು ಪ್ರಾದೇಶಿಕ ವಿಭಾಗ	381	5,13,805.00
ಹುಣಸೂರು ಪ್ರಾದೇಶಿಕ ವಿಭಾಗ	166	2,30,675.00
ಕೊಳ್ಳೇಗಾಲ ವಿಭಾಗ	1442	12,31,752.00
ಚಾಮರಾಜನಗರ ವಿಭಾಗ	53	97,000.00
ಕಾವೇರಿ ವನ್ಯಜೀವಿ ವಿಭಾಗ ಕನಕಪುರ	33	33,300.00

ಉ) ಕಾಡಾನೆಗಳಿಂದ ಹಾನಿಗೊಳಗಾದ ಬೆಳೆಗಳಿಗೆ, ಪ್ರಾಣಹಾನಿ, ಶಾಶ್ವತ ಅಂಗವಿಕಲತೆ ಸಂಭವಿಸಿದಾಗ ಪರಿಹಾರ ನೀಡುವ ಬಗ್ಗೆ ಸರ್ಕಾರದ ಆದೇಶ ದಿನಾಂಕ : 12–12–2002 ರಲ್ಲಿ ಪರಿಹಾರ ಮೊತ್ತವನ್ನು ನಿಗದಿಪಡಿಸಲಾಗಿತ್ತು. ಈ ಮೊತ್ತವನ್ನು ಪರಿಷ್ಕರಿಸಿ ಹೆಚ್ಚಿನ ಪರಿಹಾರವನ್ನು ನೀಡಲು ದಿನಾಂಕ 17–01–2007 ರಂದು ಆದೇಶಿಸಲಾಗಿದೆ. ಜೀವಹಾನಿಗೆ ಮೊದಲು ಒಂದು ಲಕ್ಷ ರೂ. ಪರಿಹಾರ ನೀಡುತ್ತಿದ್ದು, ಈಗ ರೂ.1.50 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಬೆಳೆಹಾನಿ ಪರಿಹಾರ ಮತ್ತು ಶಾಶ್ವತ ಅಂಗವಿಕಲತೆ ಪ್ರಕರಣಗಳಿಗೆ ಶೇಕಡ 30ರ ಮೇಲೆ ಹೆಚ್ಚಳ ನೀಡಲಾಗಿದೆ. ಇದರಿಂದ ತೊಂದರೆಗೊಳಗಾದ ರೈತರ ಮತ್ತು ಇತರರಿಗೆ ಸೂಕ್ತ ಪರಿಹಾರ ಒದಗಿಸಿದಂತಾಗುತ್ತದೆ.

1326 (1644) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಹಾಗೂ ಗುರುತಿಸಲಾದ ಕನಿಷ್ಠ 3800 ಹಿಂಬಾಕಿ ಹುದ್ದೆಗಳಿರುವುದು ನಿಜವಲ್ಲವೇ;

ಆ) ಬ್ಯಾಕ್‌ಲಾಗ್ ಭರ್ತಿಯ ನೇತೃತ್ವ ವಹಿಸಲು ಸಚಿವ ಸಂಪುಟದ ಉಪಸಮಿತಿಯು ಅಸ್ತಿತ್ವದಲ್ಲಿದೆಯೇ;

ಇ) ಆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಯಾರು ಯಾರು;

ಈ) ಹಿಂಬಾಕಿ ಹುದ್ದೆಗಳನ್ನು ತುಂಬಲು ಉಪಸಮಿತಿಯು ಕಾಲ-ಕಾಲಕ್ಕೆ ತನ್ನ ಸಭೆಗಳನ್ನು ನಡೆಸಿ, ಪ್ರಗತಿ ಪರಿಶೀಲನೆ ಮಾಡುತ್ತಿಲ್ಲವೇ;

ಉ) ಕಳೆದ ಎರಡು ವರ್ಷಗಳ ಅವಧಿಯಲ್ಲಿ ಈ 3800 ಹುದ್ದೆಗಳ ಪೈಕಿ ಕೇವಲ 300 ಹುದ್ದೆಗಳನ್ನು ಮಾತ್ರ ತುಂಬಿರುವುದನ್ನು ಸಂಪುಟ ಉಪಸಮಿತಿ ಗಮನಿಸಿದೆಯೇ;

ಊ) ಹಿಂಬಾಕಿ ಹುದ್ದೆಗಳ ಭರ್ತಿಗಾಗಿ ಸರ್ಕಾರವು ಯಾವ ಚುರುಕಿನ ಕಾರ್ಯಕ್ರಮಗಳನ್ನು ಆರಂಭಿಸುತ್ತದೆ?

ಬಾಲಚಂದ್ರ ಲ.ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಒಟ್ಟು 13138 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ.

ಆ) ಹೌದು.

ಇ) ಸಮಿತಿ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ.

1) ಶ್ರೀ ಬಿ.ಎಸ್. ಯಡಿಯೂರಪ್ಪ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ – **ಅಧ್ಯಕ್ಷರು**

2) ಶ್ರೀ ಎಂ.ಪಿ.ಪ್ರಕಾಶ್, ಮಾನ್ಯ ಗೃಹ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು – **ಸದಸ್ಯರು**

3) ಶ್ರೀ. ಬಸವರಾಜ ಎಸ್. ಹೊರಟ್ಟಿ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು – **ಸದಸ್ಯರು**

4) ಶ್ರೀ. ಡಿ.ಹೆಚ್. ಶಂಕರಮೂರ್ತಿ, ಮಾನ್ಯ ಉನ್ನತ ಶಿಕ್ಷಣ ಸಚಿವರು – **ಸದಸ್ಯರು**

5) ಶ್ರೀ. ಆಲ್ಕೋಡ್ ಹನುಮಂತಪ್ಪ, ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು – **ಸದಸ್ಯರು**

6) ಶ್ರೀ. ಗೋವಿಂದ ಎಂ.ಕಾರಜೋಳ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು – **ಸದಸ್ಯರು**

7) ಶ್ರೀ. ಬಾಲಚಂದ್ರ ಲ. ಜಾರಕಿಹೊಳಿ, ಮಾನ್ಯ ಸಮಾಜ ಕಲ್ಯಾಣ ಸಚಿವರು – **ಸದಸ್ಯರು**

ಈ) ಹಿಂಬಾಕಿ ಹುದ್ದೆಗಳನ್ನು ತುಂಬಲು ಸಚಿವ ಸಂಪುಟದ ಉಪ ಸಮಿತಿಯು ಅಗತ್ಯ ಕಂಡು ಬಂದಾಗಲೆಲ್ಲ ಸಭೇ ಸೇರಿ ಪ್ರಗತಿ ಪರಿಶೀಲನೆ ನಡೆಸುತ್ತಿದೆ.

ಉ) ಇಲಾಖೆಗಳಲ್ಲಿ ಒಟ್ಟು ಗುರುತಿಸಲಾಗಿರುವ 13138 ಹುದ್ದೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ 1302 ಹುದ್ದೆಗಳನ್ನು ವಿವಿಧ ಇಲಾಖೆಗಳಲ್ಲಿ ಭರ್ತಿ ಮಾಡಲಾಗಿದೆ.

ಊ) ಸಚಿವ ಸಂಪುಟ ಉಪಸಮಿತಿ ದಿನಾಂಕ : 18–12–2006 ರಂದು ಸಭೆ ನಡೆಸಿ ಬಾಕಿ ಇರುವ ಎಲ್ಲಾ ಹಿಂಬಾಕಿ ಹುದ್ದೆಗಳನ್ನು ಭರ್ತಿ ಮಾಡಲು ಸೂಚನೆ ನೀಡಿದೆ. ಹಿಂಬಾಲಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

1328 (1797) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಡಿಗೆ ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿರುವ ಉದ್ದೇಶಗಳೇನು ಹಾಗೂ ಇದರ ಕೆಲಸವೇನು;

ಆ) ಇದರಿಂದ ಬಾಡಿಗೆದಾರರಿಗೆ ಯಾವ ಅನುಕೂಲಗಳು ದೊರೆಯುತ್ತಿವೆ;

ಇ) ಈ ಕಛೇರಿಗಳು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ;

ಈ) ಬೆಂಗಳೂರಿನಲ್ಲಿ ಎಷ್ಟು ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ;

ಉ) ಇವುಗಳ ಕಾರ್ಯವ್ಯಾಪ್ತಿಗೆ ಬರುವ ಪ್ರದೇಶಗಳು ಯಾವುದು (ಕಛೇರಿಗಳ ವಿಳಾಸ ಮತ್ತು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವಿವರಗಳನ್ನು ಒದಗಿಸುವುದು);